ಓ.ಎಸ್. ನಂ. 75/2018
ಪಿ.ಡಬ್ಲ್ಯೂ- 1

(ಇಂದು ದಿಃ 03-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದುವರೆದ ಪಾಟೀ ಸವಾಲು **:- ಶ್ರೀ.BSS** ವಕೀಲರಿಂದ **:-**

ದಾವಾ ಸ್ವತ್ತುಗಳ ಸರ್ವೆ ನಂಬರಗಳು ಮತ್ತು ಚೆಕಬಂದಿನನಗೆ ಗೊತ್ತಿಲ್ಲ. ನಾನು 6 ವರ್ಷಗಳ ಹಿಂದೆ ಭಾಗ ಕೊಡು ಎಂದು 1 ನೇಪ್ರತಿವಾದಿ ನಾಗಪ್ಪನನ್ನು ಕೇಳಿದ್ದೆ. ನಾನು ಆರೀತಿ 6 ವರ್ಷಗಳ ಹಿಂದೆ ಭಾಗ ಕೊಡಿ ಎಂದು ನಾಗಪ್ಪನನ್ನು ಕೇಳಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗಪ್ಪ ಮತ್ತು ನನ್ನ ತಂದೆ ಭೀಮಸೇನ ಈ ಹಿಂದೆ ಬೇರೆ ಆಗಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಸರ್ವೆ ನಂ. 727/1 ರಲ್ಲಿ 25 ಗುಂಟೆ, 727/2 ರಲ್ಲಿ 3 ಎಕರೆ, 727/3 ರಲ್ಲಿ 2 ಎಕರೆ, 727/5 ರಲ್ಲಿ 2 ಎಕರೆ, 727/6 ರಲ್ಲಿ 1 ಎಕರೆ, 727/7 ರಲ್ಲಿ 2 ಎಕರೆ 20 ಗುಂಟೆ, 727/8 ರಲ್ಲಿ 35 ಗುಂಟೆ ಜಮೀನುಗಳು ನನ್ನ ತಂದೆ ಭಾಗಕ್ಕೆ ಬಂದಿದ್ದವು ಎಂದರೆ ಸರಿಯಲ. ಅದೇ ರೀತಿ ಸರ್ವೆ ನಂ. 727/4 ರಲ್ಲಿ 4 ಎಕರೆ 38 ಗುಂಟೆ, 740 ರಲ್ಲಿ 9 ಎಕರೆ 31 ಗುಂಟೆ 1 ನೇ ಪ್ರತಿವಾದಿ ನಾಗಪ್ಪನ ಭಾಗಕ್ಕೆ ಬಂದಿದ್ದವು ಎಂದರೆ ಸರಿಯಲ್ಲ. ಭಾಗ ಆದಾಗಿನಿಂದ ಇಬ್ಬರು ಅವರವರ ಭಾಗದ ಜಮೀನುಳನ್ನು ಅವರವರು ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಮಗಳು ದೇವಕಿಯನ್ನು ನಾಗಪ್ಪನ ಮಗ ಭೀಮರಾಯನಿಗೆ ಮದುವೆ ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ಗಂಡ ಹೆಂಡತಿ ನಡುವೆ ಹೊಂದಾಣಿಕೆ ಆಗದೆ ಕಳೆದ 4-5 ವರ್ಷಗಳಿಂದ ನನ್ನ ಮಗಳು ನನ್ನ ಜೊತೆ ವಾಸ ಇದ್ದಾರೆ ಎಂದರೆ ಸರಿ. ನನ್ನ ಮಗಳು ಮನೆಯಲ್ಲಿದ್ದಾಗಿಂದ ನಾನು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಭೀಮರಾಯ ನನ್ನ ಮಗಳನ್ನು ತನ್ನ ಜೊತೆ ಇಟ್ಟುಕೊಳ್ಳದೆ ತವರಿಗೆ ಕಳುಹಿಸಿರುವ ಕೋಪದಿಂದ ಆತನಮೇಲೆ ಸೇಡು ತಿರಿಸಿಕೊಳ್ಳುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನಾಗಪ್ಪನ ನಡುವೆ ಈ ಹಿಂದೆ ವಿಭಾಗ ಆಗಿದ್ದರೂ ಕೂಡ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಶ್ರೀ. SRP ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,ಸೇಡಂ.